ಶ್ರೀ ಮುರುಗೇಶ್ ನಿರಾಣಿ: (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಪೀಣ್ಯ 2ನೇ ಹಂತದಲ್ಲಿ 140–00 ಎಕರೆ ಜಮೀನನ್ನು ಕೆ.ಎಸ್.ಎಸ್.ಐ.ಡಿ.ಸಿ. ಗೆ ಹಂಚಿಕೆ ಮಾಡಲಾಗಿದೆ.

ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಯು 456 ಕೈಗಾರಿಕಾ ಶೆಡ್‌ಗಳನ್ನು ವಿವಿಧ ಘಟಕಗಳಿಗೆ ಹಂಚಿಕೆ ಮಾಡಿರುತ್ತದೆ.

ಆ) ಕೆ.ಎಸ್.ಎಸ್.ಐ.ಡಿ.ಸಿ.ಯು ಕೈಗಾರಿಕಾ ಶೆಡ್‌ಗಳ ನಿರ್ಮಾಣದ ಹಂತದಲ್ಲಿಯೇ ರಸ್ತೆ, ಒಳಚರಂಡಿ ಹಾಗೂ ಇತರೇ ಸೌಲಭ್ಯಗಳನ್ನು ಒದಗಿಸಿರುತ್ತದೆ. ಇದನ್ನು ಹೊರತುಪಡಿಸಿ ಇನ್ನಿತರೇ ಸೌಕರ್ಯಗಳಾದ ಅಂಚೆ ಕಛೇರಿ, ಪೊಲೀಸ್ ಠಾಣೆ, ಉಪಹಾರ ಮಂದಿರ, ದೂರವಾಣಿ ವಿನಿಮಯ ಕೇಂದ್ರ, ಕೈಗಾರಿಕಾ ಸಂಘ, ವಾಯುಮಾಲಿನ್ಯ ನಿರ್ಮೂಲನಾ ಮಂಡಳಿ ಇವುಗಳನ್ನೂ ಸಹ ಕೈಗಾರಿಕಾ ವಸಾಹತುವಿನಲ್ಲಿ ಒದಗಿಸಲಾಗಿದೆ.

ಇ) ಸದರಿ ಉದ್ದೇಶಗಳಿಗಾಗಿ ಕಾಯ್ದಿರಿಸಿರುವ ಸ್ಥಳ ಹಾಗೂ ವಿಸ್ತೀರ್ಣದ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ.	ಸ್ಥಳ ಹಾಗೂ ವಿಸ್ತೀರ್ಣದ ವಿವರ	ವಿಸ್ತೀರ್ಣ (ಚ.ಮೀ.ಗಳಲ್ಲಿ)
1.	ರಸ್ತೆಗಳು ಮತ್ತು ಚರಂಡಿಗಳು	189802
2.	ಅಂಚೆ ಕಛೇರಿ	36
3.	ಪೊಲೀಸ್ ಠಾಣೆ	450
4.	ಉಪಹಾರ ಮಂದಿರ	400
5.	ದೂರವಾಣಿ ವಿನಿಮಯ ಕೇಂದ್ರ	320
6.	ಪೀಣ್ಯ ಕೈಗಾರಿಕಾ ಸಂಘ	1053
7.	ವಾಯು ಮಾಲಿನ್ಯ ನಿರ್ಮೂಲನಾ ಮಂಡಳಿ	400

ಈ) ಕಾಯ್ದಿರಿಸಲಾದ ಸ್ಥಳಗಳನ್ನು ಸದರಿ ಉದ್ದೇಶಕ್ಕಾಗಿಯೇ ಉಪಯೋಗಿಸಲಾಗಿದೆ.

ಜಮೀನುಗಳ ಹಳೆ ಕ್ರಯ ಪತ್ರಗಳ ಖಾತೆ ಮಾಡುವ ಬಗ್ಗೆ

18(48): ಶ್ರೀ ಮುನಿರಾಜು ಎಸ್. (ದಾಸರಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಂದಾಯ ಇಲಾಖೆಯಲ್ಲಿ ಹಳೆಯ ಕ್ರಯಪತ್ರಗಳ ಖಾತೆ ಮಾಡಲು ಗಣಕೀಕರಣ ಕೇಂದ್ರಕ್ಕೆ ನೀಡಿದಾಗ 01-06-2006ರ ನಂತರ ದಿನಾಂಕದ ಖಾತೆ ಮಾಡಲು ಗಣಕೀಕರಣ ತಂತ್ರಾಂಶದಲ್ಲಿ ಅವಕಾಶ ಇಲ್ಲವೆಂದು ತಿಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, 01-06-2006ರ ನಂತರ ದಿನಾಂಕದ ಜಮೀನುಗಳ ಹಳೆಯ ಕ್ರಯಪತ್ರಗಳ ಖಾತೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ. ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿಯನ್ನು ನೀಡುವುದು.

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಹೌದು. ದಿನಾಂಕ:01-06-2006 ರಿಂದ ಹೊಸ ಪದ್ಧತಿ ಅಳವಡಿಸಿದ್ದು ಇದರಂತೆ ಉಪನೋಂದಣಾಧಿಕಾರಿಗಳು ನೋಂದಣಿಯಾದ ಎಲ್ಲಾ ಪತ್ರಗಳ 'ಜೆ' ನಮೂನೆ ತಿಳುವಳಿಕೆ ಚೀಟಿಯನ್ನು ವಿದ್ಯುನ್ಮಾನ ಮೂಲಕ ಭೂಮಿ ಕೇಂದ್ರಕ್ಕೆ ಕಳುಹಿಸುತ್ತಿದ್ದು ಖಾತೆ ಬದಲಾವಣೆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಯಾವುದಾದರೂ ವಿದ್ಯುನ್ಮಾನ 'ಜೆ' ನಮೂನೆಗಳು ಉಪನೋಂದಣಾಧಿಕಾರಿ ಕಛೇರಿಯಿಂದ ಬರದಿದ್ದಲ್ಲಿ ಸಾರ್ವಜನಿಕರು ಸದರಿ ತಿಳುವಳಿಕೆ ಚೀಟಿಯನ್ನು ಮತ್ತೊಮ್ಮೆ ಕಳುಹಿಸಿಕೊಡಲು ಉಪನೋಂದಣಾಧಿಕಾರಿಯನ್ನು ಕೋರಬಹುದಾಗಿರುತ್ತದೆ. ಬದಲಾದ ತಂತ್ರಾಂಶದಲ್ಲಿ ಮ್ಯಾನ್ಯುಯಲ್ 'ಜೆ' ಸ್ಲಿಪ್ ಅನ್ನು ಸ್ವೀಕರಿಸಲು ಅವಕಾಶ ಇರುವುದಿಲ್ಲವಾದ್ದರಿಂದ ಸಾರ್ವಜನಿಕರು ತಾಲ್ಲೂಕು ಭೂಮಿ ಕೇಂದ್ರಕ್ಕೆ ಮ್ಯಾನ್ಯುಯಲ್ 'ಜೆ' ನಮೂನೆ ಚೀಟಿಯನ್ನು ತಂದಿದ್ದಲ್ಲಿ ಅವರಿಗೆ ಉಪನೋಂದಣಾಧಿಕಾರಿಯವರನ್ನು ಸಂಪರ್ಕಿಸಿ ವಿದ್ಯುನ್ಮಾನ 'ಜೆ' ನಮೂನೆ ಕಳುಹಿಸಿಕೊಡುವಂತೆ ಕೋರಲು ಸೂಚಿಸಲಾಗುತ್ತದೆ.

ಆ) ಉದ್ಭವಿಸುವುದಿಲ್ಲ.